# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-176 ಬಿ.ಟಿ.ಎಂ ಬಡಾವಣೆ ಕಛೇರಿಯಲ್ಲಿ ದಿನಾಂಕ: 07.01.2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿಗಳನ್ನು ರಚಿಸುವ ಸಲುವಾಗಿ ಮಾನ್ಯ ಆಯುಕ್ತರು, ಬಿ.ಬಿ.ಬಿ.ಎಂ.,ರವರ ಕಛೇರಿ ಆದೇಶದ ಸಂಖ್ಯೆ:ಬಿ12(5)/ಪಿಆರ್/35/2020-21/21-09-2020ರ ಆದೇಶದಂತೆ ನೋಡೆಲ್ ಅಧಿಕಾರಿಯನ್ನಾಗಿ ಶ್ರೀ.ವೆಂಕಟೇಶ್.ಎಸ್, ಐ.ಆರ್.ಎಸ್, ಜಂಟಿ ಆಯುಕ್ತರು, ಹಣಕಾಸು, ಬಿ.ಬಿ.ಎಂಪಿ.ರವನ್ನು ನೇಮಿಸಲಾಗಿದ್ದು, ಸದರಿ ಆದೇಶದಂತೆ ವಾರ್ಡ್ ಮಟ್ಟದಲ್ಲಿ ಸಾರ್ವಜನಿಕರಿಗೆ ಪ್ರಮುಖವಾದ ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ/ನಿರ್ಮಾಣ, ಬೀದಿ ದೀಪಗಳ ನಿರ್ವಹಣೆ, ನೀರು ಸರಬರಾಜು ಮತ್ತು ಒಳಚರಂಡಿ ಮತ್ತು ಇನ್ನಿತರ ಕಲ್ಯಾಣ ಕಾರ್ಯಕ್ರಮಗಳಂತಹ ಹಲವಾರು ಸೌಲಭ್ಯಗಳನ್ನು ಪರಿಣಾಕಾರಿಯಾಗಿ ಒದಗಿಸುವ ನಿಟ್ಟಿನಲ್ಲಿ ಮತ್ತು ಪಾಲಿಕೆಯ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ಪಾಲಿಕೆಯ ವಾರ್ಡ್ ಹಂತದಲ್ಲಿ ಸಮಿತಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ/ ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

**ಸಭೆಗೆ ಹಾಜರಿದ್ದ ಅಧಿಕಾರಿ/ಸದಸ್ಯರುಗಳ ವಿವರ**

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ವೆಂಕಟೇಶ್.ಎಸ್, ಜಂಟಿ ಆಯುಕ್ತರು, ಹಣಕಾಸು ಬಿ.ಬಿ.ಎಂ.ಪಿ. | 9480685634 |
| 2 | ಶ್ರೀ.ನರೇಶ್‌ಕುಮಾರ್.ಕೆ ಸ.ಇಂ-176 ವಾರ್ಡ್ | 9844407499 |
| 3 | ಶ್ರೀ.ಮಲ್ಲಿಕಾರ್ಜುನ್ ಹಿರಿಯ ಆರೋಗ್ಯ ಪರಿವೀಕ್ಷಕರು | 9740660072 |
| 4 | ಶ್ರೀ. ಪ್ರಹ್ಲಾದ್,ಕಿರಿಯ ಆರೋಗ್ಯಾ ಪರಿವೀಕ್ಷಕರು | 9972320005 |
| 5 | ಶ್ರೀ. ಮುನಿರಾಜು ಸ್ಯಾನಟರಿ ದಫೇದಾರ | 9844884555 |
| 6 | ಶ್ರೀ ಲಿಂಗಮಯ್ಯ ಮೇಲ್ವಿಚಾರಕರು | 9844485981 |
| 7 | ಶ್ರೀ ನರಸಿಂಹ | 9035465589 |
| 8 | ಶ್ರೀ.ಗೋಪಾಲಕೃಷ್ಣ ಅಧ್ಯಕ್ಷರು ಕುವೆಂಪು ನಾಗರೀಕ ವೇದಿಕೆ | 9900111391 |

* * * * * *

ದಿನಾಂಕ-07-01-2022 ರಂದು ಬೆಳಿಗ್ಗೆ 11.00 ಗಂಟೆಗೆ ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರಿಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.



Scanned with CamScanner

**ಘನತ್ಯಾಜ್ಯ ನಿರ್ವಹಣೆ ಮಾಡುವ ಬಗ್ಗೆ:-**

ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಕ್ರಮವಾಗಿ ಮಾತನಾಡಿ ಬಿ.ಟಿ.ಎಂ ಬಡಾವಣೆಯ ಅನೇಕ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಕಸದ ರಾಶಿಗಳು ಮರದ ಕೊಂಬೆ ರಂಬೆಗಳು ಬಿದ್ದಿದ್ದು, ಸುಮಾರು ದಿನಗಳಿಂದ ಸರಿಯಾಗಿ ಘನತ್ಯಾಜ್ಯ ನಿರ್ವಹಣೆಯಾಗುತ್ತಿಲ್ಲವೆಂದು ಹಾಗೂ ಮನೆ ಮನೆಗಳಿಂದ ಕಸ ಸಂಗ್ರಹಿಸಲು ಸರಿಯಾಗಿ ಆಟೋ ಟಿಪ್ಪರ್‌ಗಳು ಬರುತ್ತಿಲ್ಲವೆಂದು ಮತ್ತು ಖಾಲಿ ನಿವೇಶನಗಳಲ್ಲಿ ಕಸದ ರಾಶಿಗಳು ಹಾಗೆಯೇ ಇದೆ ಎಂದು ತಿಳಿಸಿದರು ಹಾಗೂ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ತಹಲ್‌ವರಗೂ ಸಹ ವಾರ್ಡ್ ಸಮಿತಿ ಸಭೆಗೆ ಹಾಜರಾಗಿಲ್ಲವೆಂದು ವಿಷಾಧ ವ್ಯಕ್ತಪಡಿಸಿದರು.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ 176 ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಘ.ತ್ಯಾನಿ ಬಿ.ಟಿ.ಎಂ ವಲಯ

**ರಸ್ತೆ ಅಗೆತಗಳು ಮತ್ತು ರಸ್ತೆಗುಂಡಿಗಳ ನಿರ್ವಹಣೆ ಮಾಡುವ ಬಗ್ಗೆ:-**

ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಕ್ರಮವಾಗಿ ಮಾತನಾಡಿ ಬಿ.ಟಿ.ಎಂ ಬಡಾವಣೆಯ ಅನೇಕ ರಸ್ತೆಗಳಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ಎಲ್ಲೆಂದರಲ್ಲಿ ಒಳಚರಂಡಿ ಮತ್ತು ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ರಸ್ತೆಗಳನ್ನು ಅಗೆದಿದ್ದು, ಸರಿಯಾಗಿ ರಸ್ತೆಯನ್ನು ಯಥಾಸ್ಥಿತಿಗೆ ತರುವಲ್ಲಿ ವಿಫಲರಾಗಿದ್ದು ಹಾಗೂ ಮಣ್ಣಿನ ರಾಶಿಗಳನ್ನು ಹಾಗೆಯೇ ಬಿಟ್ಟಿದ್ದು ಇದರಿಂದ ವಾಹನಸವಾರರಿಗೆ ತೊಂದರೆಯಾದಲ್ಲಿ ಸದರಿಯವರೆ ಜವಾಬ್ದಾರರಾಗಿರುತ್ತಾರೆಂದು ತಿಳಿಸಿದರು.

ಮುಂದುವರೆದು, 7ನೇ ಅಡ್ಡರಸ್ತೆಯಲ್ಲಿ ಕೆಲವಡೆ ರಸ್ತೆಗುಂಡಿಗಳಿದ್ದು, ಕೂಡಲೇ ಮುಚ್ಚುವಂತೆ ಕೋರಿದರು.

ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಟಿ.ಎಂ ಲೇಔಟ್ ಉಪವಿಭಾಗ

**ಕೋವಿಡ್-19 ಸೊಂಕು ಹರಡದಂತೆ ನಿರ್ವಹಣೆ ಮಾಡುವ ಬಗ್ಗೆ:-**

ಸಭಾಧ್ಯಕ್ಷರು ಮಾತನಾಡಿ, ಮಾರ್ಷಲ್ ರವರಿಗೆ ಮಹಾಮಾರಿ ಕೊರೋನ ರೋಗ ಮೂರನೇ ಅಲೆ ಹರಡದಂತೆ ತಡೆಯಲು ಮುಂಜಾಗ್ರತ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಭೆ, ಸಮಾರಂಭಗಳು ನಡೆದರೆ ತಪಾಸಣೆ ಮಾಡಿ, ಪರವಾನಿಗೆ ಇಲ್ಲದಿದ್ದರೆ ಪರಿಶೀಲಿಸಿ ಅಂತಹ ಸಮಾರಂಭಗಳನ್ನು ಸ್ಥಗಿತಗೊಳಿಸತಕ್ಕದ್ದು, ಮತ್ತು ಕಡ್ಡಾಯವಾಗಿ ಮಾಸ್ಕ್ ದರಿಸುವುದು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳು ಜಾಗೃತಿ ಮೂಡಿಸಬೆಕು ಹಾಗೂ ಮಾಸ್ಕ ದರಿಸದೇ ಇದ್ದವರಿಗೆ ದಂಡ ವಸೂಲಿ ಮಾಡಲು ಸಭೆಯಲ್ಲಿ ಹಾಜರಿದ್ದು ವಾರ್ಡ್ ಸದಸ್ಯರು ರವರಿಗೆ ಸೂಚಿಸಿದರು.

**ವಾರ್ಡ್ ಮಟ್ಟದ ಅವಶ್ಯಕ ಕಾಮಗಾರಿಗಳನ್ನು ಅನುಮೋದನೆ ಬಗ್ಗೆ:-**

2021-22ನೇ ಸಾಲಿನ ಕೊಳವೆಬಾವಿಗಳ ನಿರ್ವಹಣೆ ಜೊತೆ ದುರಸ್ಥಿ ಕಾಮಗಾರಿ, ರಸ್ತೆ ನಿರ್ವಹಣೆ ಮತ್ತು ಚರಂಡಿಯಲ್ಲಿ ಹೂಳೆತ್ತುವ ಕಾಮಗಾರಿಗಳ ಬಗ್ಗೆ ಸಭೆಯ ಕಾರ್ಯದರ್ಶಿಯವರು ಮಾತನಾಡಿ, ಮೇಲ್ಕಂಡ ವಿಷಯದ ಬಗ್ಗೆ ಈ ಕೆಳಗೆ ನಮೂದಿಸಿರುವ 3 ಕಾಮಗಾರಿಗಳನ್ನು ನಿರ್ವಹಿಸುವಸಲುವಾಗಿ ಹಾಗೂ ಮಾನ್ಯ ಮುಖ್ಯ ಅಭಿಯಂತರರು ರವರ ಟಿಪ್ಪಣಿ ಹಾಳೆಯ ಆದೇಶದ ಸಂಖ್ಯೆ ಮು.ಅ(ದ)/ಜಿ.ಎಲ್/770/21-22 ಮತ್ತು ಮು.ಅ(ದ)/ಜಿ.ಎಲ್/771/21-22ರ ಆದೇಶದನ್ವಯ ಸದರಿ ಕಾಮಗಾರಿಗಳು ಸಾರ್ವಜನಿಕರ ಹಿತದೃಷ್ಟಿ



Scanned with CamScanner

ಮೇರೆಗೆ ಅತೀ ಜರೂರಾಗಿ ನಿರ್ವಹಿಸಬೇಕಾಗಿರುವುದರಿಂದ ವಾರ್ಡ್ ಕಮಿಟಿಯ ಎಲ್ಲಾ ಸದಸ್ಯರಮುಂದೆ ಪ್ರಸ್ತಾಪಿಸಲಾಗಿ, ಸಹಮತ ದೊರೆತ್ತಿರುತ್ತದೆ.

1) **Annual Maintenance of Borewells and Water Supply lines in ward No 176 BTM Layout – 20.00 Lakhs**
2) **Desilting and Improvements to drains and footpath in Ward No 176 BTM Layout**
3) **Filling of potholes in ward jurisdiction in ward No 176 BTM Layout- 20.00 Lakhs**

ಕೊನೆಯದಾಗಿ ಸಭೆ ಅಧ್ಯಕ್ಷರು ಮಾತನಾಡಿ, ಹಾಲಿ ದೇಶವ್ಯಾಪ್ತಿ ಕೋರೋನ ರೋಗಾಣುವಿನ ಹೊಸದಾಗಿ ರೂಪಾಂತರ ತಳಿ ಓಮಿಕ್ರಾನ್ ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡುತ್ತಿದುರವುದರಿಂದ ರೋಗ ಹರಡುವುದನ್ನು ತಡೆಗಟ್ಟಲು ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರಿಗೆ ತಿಳಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

7/01/2022

ಕಾರ್ಯದರ್ಶಿಗಳು,
for ವಾರ್ಡ್ ಸಂಖ್ಯೆ:176, ಬಿ.ಟಿ.ಎಂ ಬಡಾವಣೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಪ್ರತಿಯನ್ನು:</u>

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ

Scanned with CamScanner